# ಆಹಾ ಸುದ್ದಿ!

★ ಸಸಿತೋಟ



ಪೆರುವಿನ ಲಿಮಾದಲ್ಲಿ ನಡೆದ ಕತ್ತರಿ ನೃತ್ಯದ ಸ್ಪರ್ಧೆಯಲ್ಲಿ ನರ್ತಕನೊಬ್ಬನ ಭಂಗಿ ಹೇಗಿದೆ ನೋಡಿ. ಏನೇ ತಿಪ್ಪರಲಾಗ ಹಾಕಿದರೂ ಕತ್ತರಿಯಿಂದ ಗಾಳಿಯನ್ನು ಕತ್ತರಿಸುವ ಭಂಗಿ ಇರಲೇಬೇಕಂತೆ. ಬರಿಗೈಯಲ್ಲಿ ಗಾಳಿ ಬಗೆಯುವುದು ಎಂಬುದನ್ನು ಸ್ವಲ್ಪ ಮಾರ್ಪಡಿಸಿಕೊಂಡಿರಬಹುದು ಅಷ್ಟೆ.

ಅಮೆರಿಕಾದ ಪಾಪ್ ಗಾಯಕಿ ಲೇಡಿ ಗಾಗಾ ಎದೆಗೆ ಹೇಗೆ ಧೈರ್ಯವಾಗಿ ಮೈಕ್ರೋಫೋನ್ ಹಿಡಿದಿದ್ದಾನೆ ಈತ! ಆದರಿದು ಗಾಗಾಡಾಲ್ ಅಂತೆ. ಮೊಟ್ಟ ಮೊದಲ ಬಾರಿಗೆ ಜೀವಂತ ವ್ಯಕ್ತಿಯ ಗಾತ್ರದ ಬೊಂಬೆ ಮಾಡಿ ಆಕೆಯ ಆಲ್ಬಂ ಪ್ರಚಾರ ಮಾಡಲು ಹೊರಟಿದ್ದಾರೆ. ಮುಖವನ್ನು ಗಾಗಾ ಬೊಂಬೆಯ ಎದೆಯ ಬಳಿ ತೆಗೆದುಕೊಂಡು ಹೋದರೆ ಸಾಕು, ಹಾಡು, ಸಂದೇಶ ಎಲ್ಲಾ ಕೇಳಬಹುದಂತೆ. ಗಾಗಾ ಹೃದಯಾಳದಿಂದ ಬಂದ ಹಾಡುಗಳೇ ಇರಬಹುದು.





ರಷ್ಯಾದ ಕ್ರೇಸಿನ್ ಸ್ಥಳೀಯ ಸ್ನಾನಗೃಹದ ಮಾದರಿಯನ್ನು ಇಟ್ಟುಕೊಂಡು ರೂಪಿಸಿದ ಸಂಚಾರಿ ಸ್ನಾನಗೃಹವಿದು. ಪಕ್ಕದಲ್ಲೇ ಟ್ಯೂಬಾ ನದಿಯಿದ್ದು ನೀರಿಗಂತೂ ಬರವಿಲ್ಲ. ಸ್ನಾನಗೃಹದ ಒಳಗೆ ಎಲೆಯ ಮಸಾಜ್ ಮಾಡಿ ಹೊರಗೆ ಬಕೆಟ್‌ನಿಂದ ಸ್ನಾನ ಮಾಡಿದರಾಯ್ತಂತೆ. ಸ್ನಾನಕ್ಕೆ ಸೌಲಭ್ಯವಿಲ್ಲದ ಭಾರತದ ಕೋಟ್ಯಂತರ ಮಂದಿ ವಸತಿರಹಿತ, ಕೊಳಗೇರಿ ನಿವಾಸಿಗಳ ಸ್ನಾನಕ್ಕೂ, ಈ ಸಂಚಾರಿ ಸ್ನಾನಗೃಹ ನೀಡುವ ಸ್ನಾನಕ್ಕೂ ಅಂತಹ ವ್ಯತ್ಯಾಸ ಏನೆಂದರೆ ಇದಕ್ಕೆ ಪ್ರಚಾರವಿದೆ ಅಷ್ಟೆ!

ಚಿತ್ರ- ವಿಚಿತ್ರಗಳ ಟೀವಿ ಶೋ 'ರಿಪ್ಲೇಸ್ ಬಿಲಿವ್ ಇಟ್ ಆರ್ ನಾಟ್' ನ್ಯೂಯಾರ್ಕ್‌ನಲ್ಲಿ ಈ ಚಿತ್ರ- ವಿಚಿತ್ರ ವಸ್ತುಗಳ ಮಾರಾಟ ಇಟ್ಟುಕೊಂಡಿದೆಯಂತೆ. ಕುಗ್ಗಿಸಿದ ತಲೆ ಬುರುಡೆ, 17ನೇ ಶತಮಾನದ ಮಾಟಗಾತಿಯನ್ನು ಕೊಲ್ಲುವ ಉಪಕರಣಗಳ ಚೀಲ... ಮೊದಲಾದವುಗಳನ್ನು ಈ ಡಿಸೆಂಬರ್‌ನಲ್ಲಿ ಪ್ರೀತಿಪಾತ್ರರಿಗೆ ಉಡುಗೊರೆ ನೀಡುವವರು ಖರೀದಿಸಬಹುದಂತೆ. ಇಂಥವುಗಳನ್ನು ಚಿತ್ರ- ವಿಚಿತ್ರ ವ್ಯಕ್ತಿಗಳಲ್ಲದೇ ಮತ್ಯಾರು ಖರೀದಿಸುತ್ತಾರೆ?

ಅಮೆರಿಕಾದ ಕೊಲೊರೆಡೊದಲ್ಲಿ ಷರ್ಟ್ ತೊಡದೆ ತಲೆ ಕೂದಲು ಕತ್ತರಿಸುವ ಕೇಶ ವಿನ್ಯಾಸಕಿಯನ್ನು ಪೊಲೀಸರು ಬಂಧಿಸಿದ್ದಾರಂತೆ. ಆದರೆ ಬಂಧಿಸಿದ್ದು ಷರ್ಟ್ ತೊಡದೇ ಇರುವುದಕ್ಕಲ್ಲ, ಕೂದಲು ಕತ್ತರಿಸುವುದಕ್ಕೆ ಪರವಾನಗಿ ಇರಲಿಲ್ಲವಂತೆ. ಬಂಡಾಯಗಾರ ವಿನ್ಯಾಸಕಿ ಎಂದು ಫಲಕ ಹಾಕಿಕೊಂಡಿದ್ದ ಆಕೆ, ಪೂರ್ತಿ ನಗ್ನಳಾಗಿ ಕೇಶ ಕತ್ತರಿಸುವುದಕ್ಕೆ ಪರವಾನಗಿ ಕೋರಿದ್ದಳಂತೆ. ಪಾಪ, ವಿನ್ಯಾಸಕಿ ಬಂಡಾಯಗಾರ್ತಿ ಆಗಿರದಿದ್ದರೆ ಪರವಾನಗಿ ಮೇಲೆ ಪೊಲೀಸರ ಕಣ್ಣು ಬೀಳುತ್ತಿರಲಿಲ್ಲವೇನೋ!



ಬ್ರೆಜಿಲ್‌ನ ಸಾವೊ ಪೌಲೋದಲ್ಲಿ ಇತ್ತೀಚೆಗೆ ವಾರ್ಷಿಕ ಅತೀಂದ್ರಿಯ ಮೇಳ ನಡೆಯಿತು. ಅತೀಂದ್ರಿಯವಾದಿಗಳು ಎಲ್ಲದರ ಮೇಲೂ ಭವಿಷ್ಯ ಹೇಳಿದ್ದೇ ಹೇಳಿದ್ದಂತೆ. ಅಲ್ಲಿಯ ಸರ್ಕಾರ ಕೂಡಾ ಭವಿಷ್ಯ ಕೇಳಿತಂತೆ, ಸರ್ಕಾರ ಮುಂದಿನ ಚುನಾವಣೆಯಲ್ಲೂ ಗೆಲ್ಲುತ್ತದೆಯೇ ಎಂಬುದರ ಮೇಲಲ್ಲ, ಬದಲಾಗಿ ಮುಂದಿನ ವರ್ಷದ ಫಿಫಾ ವರ್ಲ್ಡ್ ಕಪ್ ಗೆಲ್ಲುವ ದೇಶ ಯಾವುದೆಂದು. ಎಷ್ಟೆಂದರೂ ಸರ್ಕಾರದ ನಂಬಿಕೆ ಎಂದು ನಾಗರಿಕರು ಪ್ರಶ್ನಿಸದೇ ಸುಮ್ಮನೆ ಕೂತಿರಬಹುದು.